# ಉತ್ತರ ಕರ್ನಾಟಕದ ಪ್ರತ್ಯೇಕತೆಯ ಬೇಡಿಕೆ: ಸಾಧ್ಯತೆ ಮತ್ತು ಸವಾಲುಗಳು

ಸಿದ್ದಪ್ಪ ಮ್ಯಾಗೇರಿ[1] & ಸ್ವಾಮಿ ಹೆಚ್.[2]

[1]ಸಂಶೋಧನಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.

[2]ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ

DOI: https://doi.org/10.5281/zenodo.17292091

## ABSTRACT:

ಸ್ವಾತಂತ್ರ್ಯದ ನಂತರ ಭಾರತದಲ್ಲಿದ್ದ ನೂರಾರು ದೇಶೀಯ ಸಂಸ್ಥಾನಗಳನ್ನು ಭಾರತದ ಒಕ್ಕೂಟದೊಂದಿಗೆ ಸೇರಿಸಲು ಭಾರತ ಸರ್ಕಾರ ನೀತಿ ನಿರೂಪಣೆಗಳನ್ನು ಕೈಗೊಂಡು, ಸರ್ದಾರ್ ವಲ್ಲಭಭಾಯ್ ಪಟೇಲರವರ ನೇತೃತ್ವದಲ್ಲಿ ಸ್ಟೇಟ್ಸ್ ಮಿನಿಸ್ಟ್ರಿಯನ್ನು ರಚಿಸಲಾಯಿತು. ಅದರಂತೆ ವಿ. ಪಿ. ಮೆನನ್ ರವರ ಸಹಾಯ ಮತ್ತು ಸಲಹೆಯನ್ನು ಪಡೆದು ಪಟೇಲರು ಬಹುತೇಕ ದೇಶೀಯ ಸಂಸ್ಥಾನಗಳನ್ನು ಒಕ್ಕೂಟದಲ್ಲಿ ವಿಲೀನಗೊಳಿಸಿದರು. ಇದು ಒಂದು ಭಾಗವಾದರೆ, ಕರ್ನಾಟಕವು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಇತರೆ ಎಲ್ಲ ಕ್ಷೇತ್ರಗಳಲ್ಲಿ ಅಸಮತೋಲನದಿಂದ ಕೂಡಿದ ವಿವಿಧ ರಾಜಕೀಯ ಹಿತಾಸಕ್ತಿಗಳನ್ನು ಒಳಗೊಂಡು ತನ್ನದೇ ಆದ ವಿಶಿಷ್ಟ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದ ಪ್ರದೇಶಗಳ ಸೇರ್ಪಡೆಯೊಂದಿಗೆ ಒಂದು ಸಮಗ್ರ ರಾಜ್ಯವಾಗಿ ರೂಪಗೊಂಡಿರುವುದನ್ನು ಕಾಣಬಹುದು. ಕರ್ನಾಟಕ ರಚನೆಯಾಗುವುದಕ್ಕಿಂತ ಮೊದಲೇ ಅಲ್ಲಿ ಅತ್ಯಂತ ತೀವ್ರವಾದ ಪ್ರಾದೇಶಿಕ ಅಸಮತೋಲನಗಳು ಪ್ರಮುಖವಾಗಿ ಆ ಅಸ್ತಿತ್ವಕ್ಕೆ ಬಂದಿರುವುದು ವಿಪರ್ಯಾಸವೇ ಹೌದು. ವಿಶ್ವದ ಎಲ್ಲ ರಾಷ್ಟ್ರಗಳಲ್ಲಿ ಪ್ರಾದೇಶಿಕ ಸಂಶೋಧನೆ ಎಂಬ ಪರಿಕಲ್ಪನೆಯ ಚಿಂತನೆಗಳು ಕಾಣಸಿಗುತ್ತವೆ. ಅದರಂತೆ ಭಾರತದಲ್ಲಿಯೂ ಈ ಅಂಶವು ಕೆಲವೊಂದು ರಾಜ್ಯಗಳ ಪಾರಂಪರಿಕ ಐತಿಹಾಸಿಕ ಹಿನ್ನೆಲೆಯಿಂದ ತಿಳಿಯುತ್ತದೆ. ಕರ್ನಾಟಕದಲ್ಲಿನ ಪ್ರಾದೇಶಿಕ ಅಸಮತೋಲನದ ಮೂಲಗಳನ್ನು ಗಮನಿಸಿದಾಗ, ಮುಖ್ಯವಾಗಿ ಕರ್ನಾಟಕವು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕಗಳಾಗಿ ವಿಭಜಿಸಿಕೊಂಡು ಆಧುನಿಕತೆಯ ಅಭಿವೃದ್ಧಿಯನ್ನು ಮುಂದಿಟ್ಟುಕೊಂಡು ಉತ್ತರ ಕರ್ನಾಟಕದಲ್ಲಿ ಇಂದು ಪ್ರತ್ಯೇಕತೆಯ ಕೂಗು ಕೇಳಿ ಬರುತ್ತಿರುವುದು ಗಮನಾರ್ಹವಾಗಿದೆ. ಏಕೀಕೃತ ಕರ್ನಾಟಕವಾಗಿ ಆರು ದಶಕಗಳೇ ಕಳೆದರೂ ಸಹ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸಲ್ಲಬೇಕಾದ ನ್ಯಾಯಯುತ ಸೌಲಭ್ಯಗಳು ದೊರೆಯದೆ, ಸರ್ಕಾರದ ಮಲತಾಯಿ ಧೋರಣೆಯ ನೀತಿಗಳಿಗೆ ಒಳಗಾಗಿ ನಿರ್ಲಕ್ಷ್ಯಗೊಂಡಿದೆ. ಹಾಗೂ ಉತ್ತರ ಕರ್ನಾಟಕದಲ್ಲಿ ಪ್ರಾರಂಭವಾದ ಅನೇಕ ಪ್ರಾಧಿಕಾರಗಳು ರಾಜಕೀಯ ನಾಯಕರುಗಳ ಮೂಲಕ ಉತ್ತರ ಕರ್ನಾಟಕದ ಅಭಿವೃದ್ಧಿಯ ಪಾಲಾಗದೆ, ಅವೆಲ್ಲವೂ ಕೇವಲ ರಾಜಕಾರಣಿಗಳ ಜನಪ್ರಿಯತೆಗೆ ಅಸ್ತ್ರವಾಗುತ್ತಿವೆಯೇ? ಎಂಬುದು ಒಂದು ಕಡೆಯಾದರೆ, ಮತ್ತೊಂದು ಕಡೆ ಉತ್ತರ ಕರ್ನಾಟಕ ಅಭಿವೃದ್ಧಿಯ ಹೆಸರಿನಲ್ಲಿ ಆಯಾ ಪ್ರಾಧಿಕಾರಗಳ ಆಶಯಗಳಲ್ಲಿನ ನಂಬಿಕೆಯೂ ಅದರ ನೀತಿಗಳ ಅನುಷ್ಠಾನದಲ್ಲಿ ಇರಲಿಲ್ಲವೇ? ಪ್ರಾದೇಶಿಕವಾದ ಅಭಿವೃದ್ಧಿಯನ್ನು ತರಲು ಸರ್ಕಾರ ತಂದಿರುವ ನೀತಿಗಳು ಉತ್ತರ ಕರ್ನಾಟಕದ ಜನರಿಗೆ ಪೂರಕವಾಗಿಲ್ಲವೇ? ಎಂಬ ಕೆಲವು ಪ್ರಶ್ನೆಗಳೊಂದಿಗೆ ಉತ್ತರ ಕರ್ನಾಟಕದ ಜನರ ಬೇಡಿಕೆಯಾದ ಪ್ರತ್ಯೇಕತೆ ಅಥವಾ ಪ್ರತ್ಯೇಕ ರಾಜ್ಯದ ಬೇಡಿಕೆಯ ಸಾಧ್ಯತೆ ಮತ್ತು ಸವಾಲುಗಳ ಕುರಿತಾದ ಅಧ್ಯಯನವೇ ಪ್ರಸ್ತುತ ಲೇಖನದ ಭಾಗವಾಗಿದೆ.

## KEYWORDS:

ಉತ್ತರ ಕರ್ನಾಟಕ, ಪ್ರಾದೇಶಿಕ ಅಸ್ಮಿತೆ, ಪ್ರಾಂತೀಯತೆ, ತಾರತಮ್ಯ, ಪ್ರತ್ಯೇಕತೆ, ಅನಾಭಿವೃದ್ಧಿ.

**ಪೀಠಿಕೆ**

ಕರ್ನಾಟಕದ ಏಕೀಕರಣದ ಮುಂಚಿತವಾಗಿ ಕನ್ನಡ ಮಾತನಾಡುವಂತಹ ಜನರು ಮತ್ತು ಅವರು ನೆಲೆನಿಂತಿರುವಂತಹ ಪ್ರದೇಶಗಳೆಲ್ಲವೂ ಮುಂಬೈ, ಮದ್ರಾಸ್, ಹೈದರಾಬಾದ್ ಪ್ರದೇಶಗಳಲ್ಲಿ ಸೇರಿಕೊಂಡಿದ್ದವು. ಅಷ್ಟೇ ಅಲ್ಲದೆ ಎಲ್ಲಾ ಪ್ರದೇಶಗಳು ನೆರೆಯ ರಾಜ್ಯಗಳ ಕಾನೂನಿನ ಚೌಕಟ್ಟಿನಲ್ಲಿದ್ದವು. ಬೆಳಗಾವಿ, ಧಾರವಾಡ, ವಿಜಯಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಮುಂಬೈ ಪ್ರಾಂತ್ಯದ ಆಡಳಿತಕ್ಕೆ ಒಳಪಟ್ಟಿದ್ದರೆ, ಗುಲ್ಬರ್ಗಾ, ಬೀದರ್ ಮತ್ತು ರಾಯಚೂರು ಜಿಲ್ಲೆಗಳು ಹೈದರಾಬಾದ್ ನಿಜಾಮನ ಅಧೀನದಲ್ಲಿದ್ದವು. ದಕ್ಷಿಣ ಕನ್ನಡ ಹಾಗೂ ಬಳ್ಳಾರಿ ಜಿಲ್ಲೆಗಳು ಮದ್ರಾಸ್ ಪ್ರಾಂತ್ಯದಲ್ಲಿ ಇದ್ದವು. ಅದರಂತೆಯೇ ಮೈಸೂರು ಸಂಸ್ಥಾನದಲ್ಲಿ ಒಂಬತ್ತು ಜಿಲ್ಲೆಗಳಿದ್ದವು. ಕೊಡಗು ಪ್ರತ್ಯೇಕ ಭಾಗವಾಗಿತ್ತು ಎಂಬುದು ಇಲ್ಲಿ ಪ್ರಮುಖವಾಗಿದೆ. ಈ ಎಲ್ಲ ಭಾಗಗಳನ್ನು ಒಂದುಗೂಡಿಸಿ 1956ರ ನವೆಂಬರ್ 1ರಂದು ಕನ್ನಡ ಮಾತನಾಡುವ ಎಲ್ಲಾ ಪ್ರದೇಶಗಳನ್ನು ಒಟ್ಟುಗೂಡಿಸಿ ಏಕೀಕರಣಗೊಳಿಸಿ ಮೈಸೂರು ರಾಜ್ಯವನ್ನು ರಚಿಸಲಾಯಿತು. ಇದು ಮೈಸೂರು ರಾಜ್ಯಕ್ಕೆ ಒಂದು ನಿರ್ದಿಷ್ಟ ಭಾಷಾ ನೆಲೆಯನ್ನು ನೀಡಿತು. ಆದರೆ ಅಭಿವೃದ್ಧಿಯ ದೃಷ್ಟಿಯಿಂದ ಈ ಏಕೀಕರಣದ ಭೂ ಪ್ರದೇಶಗಳ ಮಧ್ಯೆ ಅಸಮತೋಲನದ ವ್ಯತ್ಯಾಸಗಳು ಬರತೊಡಗಿದವು. ಮುಖ್ಯವಾಗಿ 30 ಜಿಲ್ಲೆಗಳು ಅಭಿವೃದ್ಧಿ ಅವಕಾಶಗಳನ್ನು ಸಮಾನವಾಗಿ ಅನುಭವಿಸುತ್ತಿವೆಯೇ? ಎಂಬ ಪ್ರಶ್ನೆ ಈ ತರಹದ ಅಸಮತೋಲನ ವ್ಯತ್ಯಾಸಗಳಿಂದ ಕಂಡುಬರುತ್ತದೆ.

ಉತ್ತರ–ದಕ್ಷಿಣ ಎಂಬುದು ಪ್ರಾದೇಶಿಕ ಅಸಮತೋಲನದ ಹಿನ್ನೆಲೆಯಿಂದ ಹುಟ್ಟಿಕೊಂಡಂತಹ ಪರಿಭಾವನೆಯಾಗಿದೆ ಎಂದರೆ ತಪ್ಪಾಗಲಾರದು. ಇದರಂತೆ ಕರ್ನಾಟಕದಲ್ಲಿ ಉತ್ತರ ಕರ್ನಾಟಕ ಹಿಂದುಳಿದ ಭಾಗವಾಗಿದೆ, ದಕ್ಷಿಣ ಕರ್ನಾಟಕ ಮುಂದುವರಿದ ಪ್ರದೇಶವಾಗಿದೆ. ಕರ್ನಾಟಕವು ಈ ತೆರನಾದ ವಿಷಯದಲ್ಲಿ ಅಸಮತೋಲನದ ಮೂಲವನ್ನು ರಾಜ್ಯವು ಅಸ್ತಿತ್ವಕ್ಕೆ ಬಂದಾಗಿನಿಂದಲೂ ಗುರುತಿಸಲಾಗಿದೆ. ರಾಜ್ಯಗಳ ಪುನರ್ ವಿಂಗಡಣೆ ಆಯೋಗಕ್ಕಿಂತ ಮುಂಚಿತವಾಗಿ ಜೆವಿಪಿ (JVP) ಸಮಿತಿ ತನ್ನ ವರದಿಯಲ್ಲಿ ದಕ್ಷಿಣ ಕರ್ನಾಟಕದ ಪ್ರದೇಶವು ಅಭಿವೃದ್ಧಿಯ ದೃಷ್ಟಿಕೋನದಿಂದ ಪ್ರಗತಿಯಲ್ಲಿ ಇರುವುದರಿಂದ ಮತ್ತು ಉತ್ತರ ಕರ್ನಾಟಕ ಪ್ರದೇಶ ಹಿಂದುಳಿದಿರುವುದರಿಂದ ಎರಡು ಕರ್ನಾಟಕಗಳನ್ನು ರಚಿಸುವುದು ವಿಹಿತ ಎಂಬ ಅಭಿಪ್ರಾಯಕ್ಕೆ ಬಂದಿತ್ತು ಎನ್ನಲಾಗಿದೆ. “ಕರ್ನಾಟಕದ ಮಟ್ಟಿಗೆ ಉತ್ತರ ಮತ್ತು ದಕ್ಷಿಣ ಗಡಿರೇಖೆಗಳ ಉಲ್ಲೇಖ ಮೊದಲ ಬಾರಿಗೆ ದೊರೆಯುವುದು ಶ್ರೀ ವಿಜಯನ ಕವಿರಾಜಮಾರ್ಗದಲ್ಲಿ. ಕ್ರಿ.ಶ. 9ನೇ ಶತಮಾನದ ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನ ಇದರ ಬಗ್ಗೆ ಉಲ್ಲೇಖಿಸಲಾಗಿದೆ. ಅದರಲ್ಲಿ ‘ಕಾವೇರಿಯಿಂದಮಾ ಗೋದಾವರಿ ವರಮಾರ್ಧ ನಾಡದ ಕನ್ನಡದೊಳ್’, ಎಂದು ಕನ್ನಡ ನಾಡಿನ ದಕ್ಷಿಣ ಮತ್ತು ಉತ್ತರ ಗಡಿಗಳನ್ನು ಉಲ್ಲೇಖಿಸಿದೆ.

**ಉತ್ತರ ಕರ್ನಾಟಕದ ಪ್ರತ್ಯೇಕತೆ ಬೇಡಿಕೆ ಸಾಧ್ಯವೇ?**

ಸಾಂಸ್ಕೃತಿಕವಾಗಿ ಉತ್ತರ ಕರ್ನಾಟಕವನ್ನು ಒಳಗೊಂಡಿರುವ ಹದಿಮೂರು ಜಿಲ್ಲೆಗಳು ಕರ್ನಾಟಕದ ಇತಿಹಾಸದಲ್ಲಿ ವಿಭಿನ್ನ ಪ್ರಾಮುಖ್ಯತೆಯನ್ನು ಹೊಂದಿವೆ. ಈ ಜಿಲ್ಲೆಗಳು ಹಳೆಯ ಮುಂಬೈ ಮತ್ತು ಹೈದರಾಬಾದ್ ಪ್ರದೇಶಗಳ ಭಾಗಗಳನ್ನು ಒಳಗೊಂಡಿವೆ. ಮತ್ತು ದಕ್ಷಿಣ ಕರ್ನಾಟಕಕ್ಕೆ ಹೋಲಿಸಿದರೆ ಪ್ರಾದೇಶಿಕ ಅಭಿವೃದ್ಧಿಯಿಂದಾಗಿ ಹಿಂದುಳಿದಿದೆ ಎಂದು ತಿಳಿದುಬರುತ್ತದೆ. ಭಾರತದಲ್ಲಿ ಸಣ್ಣ ರಾಜ್ಯಗಳ ಬೇಡಿಕೆಯು ಸಾಮಾನ್ಯವಾಗಿರುತ್ತವೆ. ಆದರೆ ಕೆಲವು ದೊಡ್ಡ ರಾಜ್ಯಗಳು ಆಡಳಿತಾತ್ಮಕವಾಗಿ ಕಾರ್ಯನಿರ್ವಹಿಸಲು ತೊಡಗಿರುತ್ತವೆ.

ಇದಲ್ಲದೆ ರಾಜ್ಯದೊಳಗಿನ ಸಾಂಸ್ಕೃತಿಕ ವೈವಿಧ್ಯತೆಗಳು ಮತ್ತು ಆರ್ಥಿಕ ಅಸಮಾನತೆಗಳು, ಪ್ರತ್ಯೇಕತಾವಾದಿ ಕಲ್ಪನೆಗಳಿಗೆ ಹೆಚ್ಚಿನ ವೇಗವನ್ನು ನೀಡುತ್ತವೆ. ಪ್ರತ್ಯೇಕತಾವಾದಿ ಚಳುವಳಿಯ ನಾಯಕರು ತಮ್ಮ ಬೇಡಿಕೆಗಳನ್ನು ಯಾವುದೇ ಸರ್ಕಾರಗಳು ಬಂದರೂ ಸಹ ಉತ್ತರ ಕರ್ನಾಟಕದ ಸಂಪೂರ್ಣ ಅಭಿವೃದ್ಧಿದಾಯಕ ನೀತಿಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಫಲವಾಗಿವೆ ಎನ್ನುವುದು ಅವರ ಅಭಿಪ್ರಾಯವಾಗಿದೆ. ಕರ್ನಾಟಕ ಕಂಡಂತಹ ಬಹುತೇಕ ಮುಖ್ಯಮಂತ್ರಿಗಳು ರಾಜ್ಯದ ದಕ್ಷಿಣ ಜಿಲ್ಲೆಗಳ ನಾಯಕರುಗಳಾಗಿದ್ದಾರೆ. ಅದರ ಪರಿಣಾಮವಾಗಿ ಅವರ ನೀತಿಗಳು ಉತ್ತರಕ್ಕಿಂತ ದಕ್ಷಿಣಕ್ಕೆ ಪ್ರಯೋಜನವನ್ನು ಪಡೆದಿವೆ ಎಂಬುವುದು ಉತ್ತರ ಕರ್ನಾಟಕ ಜನರ ಮತ್ತೊಂದು ವಾದವಾಗಿದೆ. ಉತ್ತರ ಕರ್ನಾಟಕದ ಬೇಡಿಕೆಯ ಕೂಗು ದಶಕಗಳಷ್ಟೇ ಹಳೆಯದು. ಆದರೆ ಅದರ ಕಾರಣಗಳು ಕಾಲಾಂತರದಲ್ಲಿ ಬದಲಾವಣೆಯಾಗುತ್ತಾ ಬರುತ್ತಿವೆ. ಸಾಮಾನ್ಯವಾಗಿ ದಕ್ಷಿಣದಿಂದ ಬಂದಿರುವ ರಾಜ್ಯದ ನಾಯಕರು ಉತ್ತರ ಕರ್ನಾಟಕವನ್ನು ಕಡೆಗಣಿಸಿದ್ದಾರೆ ಎಂಬ ಭಾವನೆ ಈ ಬೇಡಿಕೆಯ ಮುಖ್ಯ ತಿರುಳಾಗಿದೆ. ಇದಲ್ಲದೆ ಏಕೀಕರಣದ ಮೊದಲು ಎಲ್ಲಾ ಅಧಿಕಾರವೂ ಉತ್ತರ ಕರ್ನಾಟಕ ಪ್ರದೇಶಗಳಿಗೆ ಕೇಂದ್ರೀಕೃತವಾಗಿತ್ತು. ಸ್ವಾತಂತ್ರ್ಯದ ನಂತರ ಅದು ಬದಲಾಯಿತು ಮತ್ತು ಅಧಿಕಾರ ಕೇಂದ್ರ ದಕ್ಷಿಣ ಭಾಗಕ್ಕೆ ಸ್ಥಳಾಂತರಗೊಂಡಿತ್ತು ಎಂಬ ವಿಚಾರಗಳು ಪ್ರತ್ಯೇಕತೆಯ ಸುತ್ತ ಕೇಳಿ ಬರುತ್ತದೆ. ಹಾಗಾದರೆ ಏಕೀಕರಣದ ಮೊದಲು ಕರ್ನಾಟಕದ ಅಖಂಡತೆಗೆ ಶ್ರಮಿಸಿದ ಕೀರ್ತಿಯು ಸಹ ಉತ್ತರ ಕರ್ನಾಟಕದ ನಾಯಕರುಗಳಿಗೆ ಸಲ್ಲುತ್ತದೆ. ಏಕೀಕರಣಕ್ಕಾಗಿ ಹೋರಾಡಿದಂತಹ ಉತ್ತರ ಕರ್ನಾಟಕ ಜನರು ಯಾಕೆ ಕರ್ನಾಟಕದಲ್ಲಿ ಪ್ರತ್ಯೇಕತೆಯ ಬೇಡಿಕೆಯನ್ನು ತರುತ್ತಾರೆ ಎಂಬ ವಿಚಾರವನ್ನು ನಾವಿಲ್ಲಿ ಗಂಭೀರವಾಗಿ ತೆಗೆದುಕೊಳ್ಳುವುದು ಅನಿವಾರ್ಯವಾಗುತ್ತದೆ. ಉತ್ತರ ಕರ್ನಾಟಕದ 13 ಜಿಲ್ಲೆಗಳು ಇತ್ತೀಚೆಗೆ ಪ್ರತ್ಯೇಕ ರಾಜ್ಯಕ್ಕಾಗಿ ಹೊಸ ಕೂಗು ಎಬ್ಬಿಸುತ್ತಿರುವುದು ಹೊಸದೇನಲ್ಲ. ಯಾಕೆಂದರೆ ಸ್ವಾತಂತ್ರ್ಯಪೂರ್ವದಲ್ಲಿ ಉತ್ತರ ಕರ್ನಾಟಕವು ಐತಿಹಾಸಿಕವಾಗಿ ನಿರ್ಲಕ್ಷ್ಯಕ್ಕೆ ಒಳಪಟ್ಟಿದೆ. ಕರ್ನಾಟಕದ ಏಕೀಕರಣದ ನಂತರ ನಿರಾಸಕ್ತಿಯೇ ಉತ್ತರ ಕರ್ನಾಟಕದ ಹಿಂದುಳಿದಿರುವಿಕೆಗೆ ಕಾರಣವೆಂದು ಹೇಳಲಾಗುತ್ತದೆ.

"ಮೈಸೂರಿನಲ್ಲಿ ಎರಡು ಬಣಗಳು ಅಸ್ತಿತ್ವಕ್ಕೆ ಬಂದವು. ಆದರೆ ಯಾವ ಬಣವೂ ಬಹಿರಂಗವಾಗಿ ಉತ್ತರ ಕರ್ನಾಟಕದವರ ಕಲ್ಪನೆಯ ಏಕೀಕರಣವನ್ನು ಸ್ಪಷ್ಟವಾಗಿ ಬೆಂಬಲಿಸಲಿಲ್ಲ. ಉತ್ತರ ಕರ್ನಾಟಕ ವ್ಯಾಪಕ ಜನಾಂದೋಲನ ಸಂಘಟಿಸಲು ಉದ್ಯುಕ್ತವಾದರೆ ಮೈಸೂರಿಗರು ತೆರೆಮರೆಯಲ್ಲಿ ಆ ಬಗ್ಗೆ ಚರ್ಚಿಸಿ ತೊಡಗಿದರು" ಎಂಬುದು ಕೆಲವು ವಿದ್ವಾಂಸರ ವಿಚಾರಗಳಿಂದ ತಿಳಿದುಬರುತ್ತದೆ. ಇಲ್ಲಿ ಮುಖ್ಯವಾಗಿ "ಉತ್ತರ ಕರ್ನಾಟಕ ಮೈಸೂರಿಗೆ ಸೇರಿದರೆ ರಾಜಕೀಯ ಏರುಪೇರಾಗಿ ಲಿಂಗಾಯತರು ಪ್ರಬಲರಾಗುತ್ತಾರೆ ಎಂಬ ಸಂಶಯವು ಹಲವರಲ್ಲಿತ್ತು. ಆಗ ರಾಜಕೀಯ ಪ್ರಾಬಲ್ಯ ಹೊಂದಿದ್ದ ಮೈಸೂರಿನ ಒಕ್ಕಲಿಗ ಸಮುದಾಯವು ತನ್ನ ಪ್ರಾಬಲ್ಯ ಕಳೆದುಕೊಳ್ಳಬಹುದೆಂಬ ಆತಂಕವೂ ಇತ್ತು." ಈ ರೀತಿಯ ಬೆಳವಣಿಗೆಗಳ ಮೂಲಕ ಅಂದಿನ ರಾಜ್ಯ ರಾಜಕೀಯದ ವ್ಯವಸ್ಥೆ ಒಳಗಡೆ ಪ್ರಾದೇಶಿಕತೆಯ ಭಾಗವಾಗಿ ಜಾತಿ ಅಸ್ಮಿತೆಯು ಒಂದು ನೆಪವಾಗಿ ಅದರ ಮೂಲಕ ಉತ್ತರ ಕರ್ನಾಟಕದ ಹಿಂದುಳಿಯಲು ಕಾರಣವಾಗಿದೆ ಎಂಬುದು ಈ ಒಂದು ನಿಲುವಿನಿಂದ ತಿಳಿಯುತ್ತದೆ. ಇದರಲ್ಲಿ ಮತ್ತೊಂದು ಅಂಶವನ್ನು ಗಮನಿಸಿದರೆ "ಆಧುನಿಕೋತ್ತರ ಭಾಗವಾಗಿ ಈ ಅಸ್ಮಿತೆ ಒಂದು ಸಮಗ್ರ ವಿಶಾಲವೆಂದು ಹೊರನೋಟಕ್ಕೆ ಕಂಡುಬಂದರೂ, ಅದರ ಆಳಕ್ಕೆ ಇಳಿದಾಗ ಅದರ ವಿಘಟನೆಯ ದನಿಗಳನ್ನು ನೋಡಬಹುದು. ಉದಾಹರಣೆಗೆ ಗೋಕಾಕ್ ಚಳುವಳಿ ಸಮಗ್ರತೆಯ ಸಂಕೇತವಾದರೆ ರೈತ ಚಳುವಳಿ, ದಲಿತ ಚಳುವಳಿ, ಪರಿಸರ ಚಳುವಳಿ,

ಮಹಿಳಾ ಚಳುವಳಿಗಳು ವಿಘಟನೆಯ ಸಂಕೇತಗಳಾಗುತ್ತವೆ.'' ಅಂದರೆ ಇವು ಆಧುನಿಕೋತ್ತರ ಭಾಗವಾಗಿ ತಮ್ಮನ್ನು ತಾವು ಹಿಂದುಳಿದಿರುವಿಕೆಯನ್ನು ಗುರುತಿಸಿಕೊಳ್ಳುವಲ್ಲಿ ಅವುಗಳ ಪ್ರತಿನಿಧಿತ್ವವನ್ನು ಕಾಣಲು ಸಿಗುತ್ತದೆ. ಇಲ್ಲಿ ವಿಚಿತ್ರವೆಂದರೆ ಈ ತರಹದ ಅಸ್ಮಿತೆಗಳು ಒಂದಕ್ಕೊಂದು ಅನುಸಂಧಾನ ಮಾಡುತ್ತಿರುತ್ತವೆ ಅಥವಾ ಮುಖಾಮುಖಿಯಾಗಿರುತ್ತವೆ, ಆದರೂ ಸಹ ಇವುಗಳ ನಡುವೆ ಒಂದೆರಡು ವಿಭಿನ್ನ ಧ್ವನಿಗಳಿವೆ. ಅಂತೆಯೇ ಕೊಡಗು ಪ್ರತ್ಯೇಕತಾ ಚಳುವಳಿ, ಉತ್ತರ ಕರ್ನಾಟಕದ ಪ್ರತ್ಯೇಕತೆಯ ಹೋರಾಟ, ಇವುಗಳು ಕರ್ನಾಟಕವನ್ನು ಪ್ರಶ್ನಿಸುವಂತಹ ಅಸ್ಮಿತೆಗಳಾಗಿವೆ. ಈ ರೀತಿಯ ಹೋರಾಟಗಳ ಹಿಂದೆ ಗತಕಾಲದ ವೈಭವದ ವರ್ಣನೆಗಳಿವೆ, ಪ್ರಾದೇಶಿಕವಾದ ತಾರತಮ್ಯದ ಕಥನಗಳಿವೆ, ಅಸ್ಮಿತೆ ಸಂಘರ್ಷಗಳು, ತಾಕಲಾಟಗಳು, ಪ್ರತಿರೋಧಗಳು ಕರ್ನಾಟಕದ ರಾಜಕೀಯ ಮೇಲೆ ಮಹತ್ವವಾದ ಪರಿಣಾಮವನ್ನು ಬೀರುತ್ತವೆ.

2000 ವರ್ಷದ ಆರಂಭದಲ್ಲಿ ಸಾಮಾಜಿಕ ಕಾರ್ಯಕರ್ತರಾದ ವೈಜನಾಥ ಪಾಟೀಲ ಅವರು ಹೈದರಾಬಾದ್ ಕರ್ನಾಟಕವನ್ನು ಪ್ರತ್ಯೇಕ ರಾಜ್ಯವನ್ನಾಗಿ ಮಾಡಬೇಕೆಂದು ಒತ್ತಾಯಿಸಿದರು. ಆ ಬೇಡಿಕೆಯು ಇವತ್ತಿನ ರೀತಿಯ ಕಾಳಜಿಯಿಂದ ಹುಟ್ಟಿಕೊಂಡಿತ್ತು. ಆದರೆ ಉತ್ತರ ಕರ್ನಾಟಕದ ಬಗೆಗಿನ ರಾಜಕೀಯ ನಾಯಕರ ನಿರಾಸಕ್ತಿ ಹೊಂದಿರುವುದೇ ಕಾರಣ ಎಂದು ಆರೋಪಿಸಿದ್ದರು. ಹಾಗಾದರೆ ಯಾವ ಸರ್ಕಾರಗಳು ಉತ್ತರ ಕರ್ನಾಟಕದವರ ಸಮಸ್ಯೆಗಳಿಗೆ ಗಮನಹರಿಸಲಿಲ್ಲವೇ ಎಂದು ಪ್ರಶ್ನೆ ಮಾಡಿಕೊಂಡಾಗ, 2000ರಲ್ಲಿಯೇ ಶ್ರೀ ಎಸ್. ಎಂ. ಕೃಷ್ಣರವರ ನೇತೃತ್ವದ ಕಾಂಗ್ರೆಸ್ ಸರ್ಕಾರವು ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಉನ್ನತಾಧಿಕಾರ ಸಮಿತಿಯನ್ನು "ಪ್ರೊಫೆಸರ್ ಡಿ. ಎಂ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ರೂಪಿಸಲಾಯಿತು. ಆ ಒಂದು ಸಮಿತಿಯು ಪ್ರಾದೇಶಿಕ ಅಸಮತೋಲನಗಳ ಅಧ್ಯಯನವನ್ನು ಮಾಡಿ 2003 ರಲ್ಲಿ ತನ್ನ ಸಮಗ್ರ ಅಧ್ಯಯನದ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಲಾಯಿತು.'' ಅದರಲ್ಲಿ 29 ತಾಲ್ಲೂಕುಗಳು ಅತ್ಯಂತ ಹಿಂದುಳಿದಿವೆ ಎಂದು ಪಟ್ಟಿ ಮಾಡಿತ್ತು. ಅದರಲ್ಲಿ 26 ತಾಲ್ಲೂಕುಗಳು ಉತ್ತರ ಕರ್ನಾಟಕದವುಗಳಾಗಿವೆ. ಈ ತಾಲ್ಲೂಕುಗಳ ಅಭಿವೃದ್ಧಿಗೆ ಅಗತ್ಯವಿರುವ ಸಂಪನ್ಮೂಲಗಳ ಪ್ರಮಾಣವನ್ನು ಸಮಿತಿಯು ಸೂಚಿಸಿತು. 8 ವರ್ಷಗಳಲ್ಲಿ 16 ಸಾವಿರ ಕೋಟಿ ರೂಪಾಯಿಯ ವಿಶೇಷ ಅಭಿವೃದ್ಧಿಯ ಶಿಫಾರಸ್ಸುಗಳನ್ನು ಸೂಚಿಸಿತು. ಆದರೆ ನಂತರ ಬಂದ ಸರ್ಕಾರಗಳು ಈ ವಿಷಯದ ಬಗೆಗೆ ಮೌನವಾಗಿ ಬಿಟ್ಟಿರುವುದು ವಿಪರ್ಯಾಸವೇ ಸರಿ. ಮುಂದೆ ಶ್ರೀ ಹೆಚ್. ಡಿ. ಕುಮಾರಸ್ವಾಮಿ ಅವರ ಬಜೆಟ್‌ನಲ್ಲಿ ಮಹದಾಯಿ ಜಲ ವಿವಾದಕ್ಕೆ ಸಂಬಂಧಿಸಿದಂತೆ ಸರ್ಕಾರದ ಧೋರಣೆಗಳು ಸಮರ್ಪಕವಾಗಿಲ್ಲ ಎಂದು ಅಲ್ಲಿನ ಸರ್ಕಾರದ ವಿರುದ್ಧ ಉತ್ತರ ಕರ್ನಾಟಕ ಹೋರಾಟ ಸಮಿತಿ ಹಲವು ಬಾರಿ ರಾಜ್ಯ ಬಂದ್ ಗೆ ಕರೆ ನೀಡಿದ್ದು ಉದಾಹರಣೆಗಳನ್ನು ನಾವು ಕಾಣಬಹುದು.

ಉತ್ತರ ಕರ್ನಾಟಕದ ಹೋರಾಟ ಸಮಿತಿಯ ಪ್ರಕಾರ ಉತ್ತರ ಕರ್ನಾಟಕ ಪ್ರದೇಶವು ನೈಸರ್ಗಿಕ ಸಂಪನ್ಮೂಲಗಳಿಂದ ಸಮೃದ್ಧವಾಗಿದ್ದರೂ ನಿರುದ್ಯೋಗದಂತಹ ಸಮಸ್ಯೆಗಳು ಬಗೆಹರಿಯುತ್ತಿಲ್ಲ. ಪ್ರಾದೇಶಿಕತೆಯ ಅಸಮತೋಲನ ನಿವಾರಣೆಗಾಗಿ ಪ್ರೊಫೆಸರ್ ನಂಜುಂಡಪ್ಪ ಸಮಿತಿಯ ವರದಿಯ ಶಿಫಾರಸ್ಸುಗಳನ್ನು ಯಥಾವತ್ತಾಗಿ ಜಾರಿಗೆ ತರುವಲ್ಲಿ ಸರ್ಕಾರಗಳು ವಿಫಲವಾಗಿದ್ದರಿಂದಾಗಿ ಈ ಪ್ರದೇಶ ಬಡತನದಿಂದ ಬಳಲುತ್ತಿದೆ. ನಮ್ಮ ಭಾಗದ ರೈತರು ಹಲವು ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಈ ಹಿಂದಿನ ಎಲ್ಲ ಸರ್ಕಾರಗಳು ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಬಜೆಟ್‌ನಲ್ಲಿ ಅತ್ಯಲ್ಪ ಹಣವನ್ನು ನಿಗದಿಪಡಿಸಿವೆ.

ಇದರಿಂದಾಗಿ ಅಭಿವೃದ್ಧಿ ಎನ್ನುವುದು ಕೇವಲ ಮರೀಚಿಕೆಯಾಗಿ, ಈ ತರಹದ ಧೋರಣೆಗಳು ಮುಂದುವರಿಯುತ್ತಿವೆ. ಅದಕ್ಕಾಗಿ ಉತ್ತರ ಕರ್ನಾಟಕವನ್ನು ಪ್ರತ್ಯೇಕ ರಾಜ್ಯವನ್ನಾಗಿ ಮಾಡಬೇಕೆಂದು ಹೋರಾಟ ಸಮಿತಿ ಹಾಗೂ ಉತ್ತರ ಕರ್ನಾಟಕ ಜನರ ಧ್ವನಿಯಾಗಿದೆ.

**ಉತ್ತರ ಕರ್ನಾಟಕದ ಪ್ರತ್ಯೇಕತೆ ಬೇಡಿಕೆ ಸಾಧುವೆ?**

ಇಂದಿನ ಕರ್ನಾಟಕದ ನಕ್ಷೆಯನ್ನು ನೋಡಿದಾಗ ನಮಗೆ ಸಾವಿರಾರು ವರ್ಷಗಳ ಹೋರಾಟದ ಚಾರಿತ್ರಿಕ ಘಟನೆಗಳು ನೆನಪಾಗುತ್ತದೆ. ಈ ರೂಪಕ್ಕೆ ಬರಲು ಎಷ್ಟೋ ರಾಜವಂಶಗಳು, ಸಾಹಿತಿಗಳು, ರಾಜಕಾರಣಿಗಳು, ಕವಿಗಳು, ಬುದ್ಧಿಜೀವಿಗಳು ಮಾಡಿದಂತಹ ಹೋರಾಟವು ನಮಗೆ ಸರಿಯಾಗಿ ತಿಳಿಯದು. ಕರ್ನಾಟಕದಲ್ಲಿ ಏಕೀಕರಣದ ಪರಿಕಲ್ಪನೆಯ ಚಿಂತನೆಯನ್ನು ಮಾಡಿದವರಲ್ಲಿ ಉತ್ತರ ಕರ್ನಾಟಕದ ಧಾರವಾಡದ ಡೆಪ್ಯೂಟಿ ಚನ್ನಬಸಪ್ಪನವರು ಎಂಬುದು ಗಮನಾರ್ಹ. ಕರ್ನಾಟಕ ಏಕೀಕರಣಕ್ಕೆ ಮೊದಲು ಮೈಸೂರು ಸಂಸ್ಥಾನದ ಉತ್ತರ ಕರ್ನಾಟಕದ ಜಿಲ್ಲೆಗಳಾದ ಬೆಳಗಾವಿ, ಧಾರವಾಡ, ಬಿಜಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಮಹಾರಾಜರಿಂದ ನಿರ್ಲಕ್ಷ್ಯಕ್ಕೆ ಒಳಪಟ್ಟವು. ಅತ್ತ ಹೈದರಾಬಾದಿನ ನಿಜಾಮನ ಆಳ್ವಿಕೆಯಲ್ಲಿದ್ದ ಗುಲ್ಬರ್ಗಾ, ರಾಯಚೂರು ಮತ್ತು ಬೀದರ್ ಜಿಲ್ಲೆಗಳು ಕೂಡ ಬರಗಾಲ, ಡಕಾಯಿತರ ಹಾವಳಿಗಳಿಂದ ಬೆಳವಣಿಗೆ ಹೊಂದುವಲ್ಲಿ ವಿಫಲವಾಗಿದ್ದವು. ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ ಬಳ್ಳಾರಿ ಕ್ಷೇತ್ರವು ಉಪಮಟ್ಟಿಗೆ ಅಭಿವೃದ್ಧಿಯನ್ನು ಸಾಧಿಸಿದ್ದರೂ ಸಹ ಮೈಸೂರು ಪ್ರಾಂತ್ಯಕ್ಕೆ ಹೋಲಿಸಿದರೆ ಅಭಿವೃದ್ಧಿ ಎಂಬುವುದು ಕನಸಿನ ಮಾತಾಗಿಯೇ ಕಾಣುತ್ತಿತ್ತು. ಈ ಎಲ್ಲ ಕಾರಣಗಳಿಂದ ಬೇಸತ್ತ ಉತ್ತರ ಕರ್ನಾಟಕದ ಜನತೆ ಭಾಷಾವಾರು ಏಕೀಕೃತ ಕರ್ನಾಟಕದಿಂದಲೇ ಅಭಿವೃದ್ಧಿ ಸಾಧ್ಯ ಎಂಬುದನ್ನು ತಿಳಿದು ಏಕೀಕರಣದ ಕಹಳೆಯನ್ನು ಮೊಳಗಿಸಿದರು.

ಕರ್ನಾಟಕದ ಏಕೀಕರಣಕ್ಕೆ ಪೂರಕವಾಗಿ ಧಾರವಾಡದಲ್ಲಿ ಸ್ಥಾಪನೆಯಾದಂತಹ ವಿದ್ಯಾವರ್ಧಕ ಸಂಘ, ಕರ್ನಾಟಕ ಏಕೀಕರಣ ಸಮಿತಿ, ಕರ್ನಾಟಕ ಸಭೆಗಳು ಮಹತ್ವದ ಪಾತ್ರವನ್ನು ನಿರ್ವಹಿಸಿದವು. ಇವರ ಜೊತೆಗೆ ವಿಶಾಲ ಕರ್ನಾಟಕ, ನವಯುಗ, ಪ್ರಪಂಚ, ವಾಗ್ಭೂಷಣ ಪತ್ರಿಕೆಗಳು ಏಕೀಕರಣಕ್ಕೆ ಮಹತ್ವಪೂರ್ಣವಾದ ಕೊಡುಗೆ ನೀಡಿವೆ. ಈ ರೀತಿ ಅಖಂಡ ಕರ್ನಾಟಕವಾಗಬೇಕಾದರೆ ಉತ್ತರ ಕರ್ನಾಟಕದ ಪಾತ್ರ ಹಿರಿದಾಗಿದೆ. ಅಖಂಡ ಕರ್ನಾಟಕದ ಕನಸನ್ನು ಕಂಡಂತಹ ಉತ್ತರ ಕರ್ನಾಟಕದ ಜನರು ಯಾಕೆ ಪ್ರತ್ಯೇಕ ರಾಜ್ಯಕ್ಕಾಗಿ ಬೇಡಿಕೆಯನ್ನು ಇಡುತ್ತಿರುವುದು ನಿಜವೇ? ಒಂದು ವೇಳೆ ನಿಜವಾಗಿದ್ದರೆ ಯಾವ ಉದ್ದೇಶಕ್ಕಾಗಿ ಅವರು ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಮುಂದಿಡುತ್ತಿದ್ದಾರೆ ಅಂತ ಗಮನಿಸಿದಾಗ, ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯದ ಬೇಡಿಕೆ ಅಲ್ಲ. ಅದು ಆ ಭಾಗದ ಅಭಿವೃದ್ಧಿ ಮಾತ್ರ ಕೇಳುತ್ತಿದೆ. ನಮಗೆ ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯ ಬೇಡ, ಈ ಪ್ರದೇಶ ಅಭಿವೃದ್ಧಿ ಆಗಬೇಕು ಎನ್ನುವುದು ಅಲ್ಲಿನ ಜನರ ಬಯಕೆಯಾಗಿದೆ ಎನ್ನುವುದು ಕೆಲವು ಅಧ್ಯಯನಗಳಿಂದ ತಿಳಿದುಬರುತ್ತದೆ. ಬೆಳಗಾವಿಯಲ್ಲಿ ಸುವರ್ಣ ಸೌಧ ಉದ್ಘಾಟನೆಯಾದಾಗ ಅದನ್ನು ಉದ್ಘಾಟಿಸಿದ ಅಂದಿನ ರಾಷ್ಟ್ರಪತಿಗಳು ಸುವರ್ಣ ಸೌಧವು ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಅತಿ ಮುಖ್ಯ ಕೇಂದ್ರವಾಗಬೇಕು ಎಂದು ಹೇಳಿದ್ದರು. ಅದರಂತೆಯೇ ಬೆಂಗಳೂರಿನಲ್ಲಿರುವ ಕೆಲವು ಕಚೇರಿಗಳನ್ನು ನೇರವಾಗಿ ಹಾಗೂ ಕೆಲವು ಕಚೇರಿಗಳನ್ನು ವಿಭಜಿಸಿ ಉತ್ತರ ಕರ್ನಾಟಕಕ್ಕೆ ಸ್ಥಳಾಂತರಿಸಲಾಗಿದೆ. ಅವುಗಳಲ್ಲಿ ಮುಖ್ಯವಾಗಿ "ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ ಬೆಂಗಳೂರು ಕಚೇರಿಯನ್ನು ಆಲಮಟ್ಟಿಗೆ, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಕಚೇರಿಯನ್ನು ಬೆಳಗಾವಿಗೆ, ಸಕ್ಕರೆ

ನಿರ್ದೇಶಕರು ಮತ್ತು ಕಬ್ಬು ಅಭಿವೃದ್ಧಿ ಆಯುಕ್ತ ಕೇಂದ್ರ ಕಚೇರಿಯನ್ನು ಬೆಂಗಳೂರಿನಿಂದ ಬೆಳಗಾವಿಗೆ ಈ ರೀತಿಯಾಗಿ ಹಲವು ಪ್ರಾಧಿಕಾರಗಳು ಉತ್ತರ ಕರ್ನಾಟಕದ ಜನರಿಗೆ ಅನುಕೂಲದ ದೃಷ್ಟಿಯಿಂದಾಗಿ ಸ್ಥಳಾಂತರಿಸಲಾಗಿದೆ". ಹಾಗೂ ನಿಧಾನಗತಿಯ ಬೆಳವಣಿಗೆಯ ನಂತರ ಹವಾಮಾನ ಪರಿಸ್ಥಿತಿಗಳು ಅತಿರೇಕಕ್ಕೆ ಏರಿ ಹಲವು ವ್ಯತ್ಯಾಸಗಳು ಪ್ರಾದೇಶಿಕವಾಗಿ ಉಲ್ಬಣಗೊಂಡವು. ಉತ್ತರದಲ್ಲಿ ನೇಮಕಗೊಂಡ ಅನೇಕ ಸರ್ಕಾರಿ ನೌಕರರು ಮೊದಲ ಅವಕಾಶದಲ್ಲಿ ದಕ್ಷಿಣ ಪ್ರದೇಶಗಳಿಗೆ ವರ್ಗಾಯಿಸಲು ಬಯಸುವುದರಲ್ಲಿ ಆಶ್ಚರ್ಯವಿಲ್ಲ. ಮತ್ತು ನಮ್ಮದೇ ಸ್ಥಳೀಯ ಮತ್ತು ಪ್ರಾದೇಶಿಕ ನಾಯಕರ ನಿರಾಸಕ್ತಿಯಿಂದಾಗಿ ಈ ರೀತಿಯ ಎದ್ದು ಕಾಣುವ ಭಿನ್ನಾಭಿಪ್ರಾಯಗಳು ನಮ್ಮನ್ನು ಕಡೆಗಣಿಸಲಾಗುತ್ತದೆ ಎಂದು ಭಾವಿಸುವಂತೆ ಮಾಡುತ್ತಿದೆ.

ಈ ತರಹದ ಸಮಸ್ಯೆಗಳಿಂದ ಪ್ರತ್ಯೇಕ ಬೇಡಿಕೆಯನ್ನು ಎತ್ತುವುದು ಸಮಂಜಸವಾಗುವುದಿಲ್ಲ. ಆಂತರಿಕವಾಗಿ ಇರುವ ಸಮಸ್ಯೆಗಳನ್ನು ಸರ್ಕಾರಿ ಮಟ್ಟದಲ್ಲಿ ಅಭಿವೃದ್ಧಿಪಡಿಸಿಕೊಂಡಾಗ ಅಲ್ಲಿ ಪರಿಹಾರಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಆದರೆ ಪ್ರತ್ಯೇಕ ಬೇಡಿಕೆ ಮುಂದೆ ಇಟ್ಟುಕೊಂಡು ಸಮಸ್ಯೆಯನ್ನು ಮತ್ತಷ್ಟು ಸಮಸ್ಯೆಯನ್ನಾಗಿ ಮಾಡಿಕೊಳ್ಳುವಲ್ಲಿ ಉತ್ತರ ಕರ್ನಾಟಕದ ಬಹುತೇಕ ಪ್ರದೇಶಗಳು ಮುಂದಾಗುತ್ತೇವೆ ಎನ್ನುವುದು ಈ ಮೇಲಿನ ವಿವರಣೆಗಳಿಂದ ತಿಳಿಯುತ್ತದೆ. ಸಂಪನ್ಮೂಲಗಳನ್ನು ಪಡೆದುಕೊಳ್ಳುವಲ್ಲಿ ಉತ್ತರದ ಶಾಸಕರು ದಕ್ಷಿಣದ ಶಾಸಕರಂತೆ ಕ್ರಿಯಾಶೀಲರಾಗಿಲ್ಲ ಎಂದು ಕೆಲವರ ಅಭಿಪ್ರಾಯಪಟ್ಟರೆ, ಮತ್ತೆ ಕೆಲವರು ಉತ್ತರ ಭಾಗದ ಶಾಸಕರು ಇಂದಿಗೂ ಊಳಿಗಮಾನ್ಯ ಮನೋಭಾವದವರು, ಸ್ವಾರ್ಥಿಗಳು, ಪ್ರಜಾಸತ್ತಾತ್ಮಕ ಭಾವನೆ ಇಲ್ಲದವರು ಎನ್ನುವಂತಹ ಹಲವರ ವಾದಗಳಿವೆ. ಅದರೊಟ್ಟಿಗೆ ಇತ್ತೀಚೆಗೆ ಅತಿಯಾದ ಭ್ರಷ್ಟಾಚಾರ ಸೇರಿಕೊಂಡಿದ್ದು, ಇವು ಈ ಭಾಗದ ಅಭಿವೃದ್ಧಿಗೆ ಮಾರಕವಾಗಿದೆ. ಹಾಗಾಗಿ ಅಖಂಡ ಕರ್ನಾಟಕವನ್ನು ಕಟ್ಟಲು ಶ್ರಮಿಸಿದ ಉತ್ತರ ಕರ್ನಾಟಕದ ಜನತೆ ತಾವುಗಳು ಅಭಿವೃದ್ಧಿ ಸಾಧಿಸಲು ಬೇಕಾದ ನೀತಿ ಯೋಜನೆಗಳನ್ನು ಅಳವಡಿಸಿಕೊಂಡು ಅವುಗಳ ಕಾರ್ಯಸಾಧನೆಗೆ ಮುಂದಾಗಬೇಕು. ಅವಾಗ ಪ್ರಾದೇಶಿಕವಾಗಿ ಅಸಮತೋಲನದ ಅಂಶವನ್ನು ಅಳಿಸಲು ಸಾಧ್ಯವಾಗುತ್ತದೆ. ಸರ್ಕಾರವನ್ನು ಎಚ್ಚರಿಸುವ ಹಾಗೂ ಒಳ್ಳೆಯ ರಾಜಕೀಯ ನಾಯಕರನ್ನು ಆಯ್ಕೆಗೊಳಿಸಿ ಉತ್ತರ ಕರ್ನಾಟಕದ ಏಳಿಗೆಗೆ ಶ್ರಮಿಸುವ ವ್ಯಕ್ತಿಗಳು ಮುಂದಾದಾಗ ಪ್ರತ್ಯೇಕ ಬೇಡಿಕೆಯ ಕೂಗು ಕೇಳಿ ಬರುವುದು ಕಡಿಮೆಯಾಗುತ್ತದೆ. ಹಾಗೆ ನೋಡಿದರೆ "ನಂಜುಂಡಪ್ಪ ಸಮಿತಿಯ ಸೂಚಿಸಿದಂತ ಎಲ್ಲ ಕಾರ್ಯಕ್ರಮಗಳನ್ನು ಸರ್ಕಾರಗಳು ಕೈಗೊಳ್ಳಲಾಗಿದೆ. ಇದರಿಂದ ಉತ್ತರ ಕರ್ನಾಟಕದ ಜೀವನ ಮಟ್ಟದಲ್ಲಿ ಸಾಕಷ್ಟು ಸುಧಾರಣೆ ಕಂಡುಬರುತ್ತದೆ. ವಿಶೇಷವಾಗಿ ಹೈದರಾಬಾದ್ ಕರ್ನಾಟಕ ವಿಭಾಗದಲ್ಲಿ ಜನರು ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದಾರೆ ಎಂಬುದು ಖುಷಿಯ ವಿಚಾರವಾದರೂ, ಈ ಪ್ರಾದೇಶಿಕ ಸಮಾನತೆ ಎನ್ನುವುದು ಪೂರ್ಣವಾಗಿ ನಿವಾರಣೆಯಾಗಿಲ್ಲ." ಹಾಗಂತ ಹೇಳಿ ಪ್ರತ್ಯೇಕ ರಾಜ್ಯ ಬೇಡಿಕೆಯು ಸಾಧುವೆ? ಬಂದಾಗ ಅದಕ್ಕೆ ಪೂರಕವಾಗಿ ವಿಚಾರ ಮಾಡಿದರೆ, ನಂಜುಂಡಪ್ಪ ಸಮಿತಿಯ ಎಲ್ಲಾ ಶಿಫಾರಸ್ಸುಗಳನ್ನು ಯೋಜನೆಗಳ ರೂಪದಲ್ಲಿ ಪ್ರಾಮಾಣಿಕವಾಗಿ ಸರ್ಕಾರ ಜಾರಿಗೆ ತರುವುದು ಹಾಗೂ ತರುವ ಹಾಗೆ ಉತ್ತರ ಕರ್ನಾಟಕದ ಜನದ ಬೇಡಿಕೆಯಾಗಬೇಕು, ಹೊರತು ಪ್ರತ್ಯೇಕ ರಾಜ್ಯದ ಬೇಡಿಕೆಯ ಕೂಗು ಸಾಧುವಲ್ಲ ಅನ್ನುವಂತ ಅಂಶಗಳು ಇದರಿಂದ ತಿಳಿದುಬರುತ್ತದೆ.

**ಸಾಧ್ಯತೆಗಳು:**

- ರಾಜ್ಯ ಸರ್ಕಾರ ರೂಪಿಸಿದಂತಹ ಪ್ರೊ. ನಂಜುಂಡಪ್ಪನವರ ಸಮಿತಿಯ ವರದಿಯ ಶಿಫಾರಸುಗಳನ್ನು ಯಥಾವತ್ತಾಗಿ ಕಾರ್ಯರೂಪಕ್ಕೆ ತರುವಲ್ಲಿ ಆಯಾ ಸರ್ಕಾರಗಳು ಕಾರ್ಯನಿರ್ವಹಿಸಲು ಮುಂದಾಗಬೇಕು.
- ತಳಮಟ್ಟದಿಂದ ಸಮಸ್ಯೆಗಳನ್ನು ಅರಿತು ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಯಾವ ರೀತಿ ಅಭಿವೃದ್ಧಿ ಸಾಧಿಸಬೇಕೆನ್ನುವಂತಹ ಯೋಜನೆ ರೂಪಿಸಿ ಜಾರಿಗೊಳಿಸುವುದರಿಂದ ಕರ್ನಾಟಕದಲ್ಲಿ ಪ್ರಾದೇಶಿಕ ಸಮತೋಲನ ಅಭಿವೃದ್ಧಿಯನ್ನು ಸಾಧಿಸಬಹುದಾಗಿದೆ.
- ಅಧಿಕಾರಿಗಳು ಸರ್ಕಾರಿ ಸೌಲಭ್ಯಗಳನ್ನು ಜನರಿಗೆ ಸಮರ್ಪಕವಾಗಿ ತಿಳಿಸುವಲ್ಲಿ ಹಿಂದೆ ಬಿದ್ದಿದ್ದಾರೆ. ಹಾಗಾಗಿ ಸರ್ಕಾರಿ ಯೋಜನೆಯನ್ನು ಫಲಾನುಭವಿಗಳಿಗೆ ನೀಡಲು ಸಹಾಯಕಾರಿಯಾದ ಕೌಶಲ್ಯ ಅಭಿವೃದ್ಧಿಪಡಿಸುವುದು ಇಂದಿನ ಅವಶ್ಯಕತೆ.
- ಜನಪ್ರತಿನಿಧಿಗಳು ತಮ್ಮ ಕ್ಷೇತ್ರದಲ್ಲಿನ ಸಮಸ್ಯೆಗಳನ್ನು ಅರಿತು ಯೋಜನೆಗಳು ಮತ್ತು ಕಾರ್ಯಕ್ರಮಗಳ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸಬಹುದು ಎಂಬುದನ್ನು ಅರಿಯಬೇಕಾಗಿದೆ.
- ಸ್ಥಳೀಯ ಸಂಪನ್ಮೂಲಗಳನ್ನು ಸರಿಯಾಗಿ ಬಳಕೆಯಾಗುವಂತೆ ಕೈಗಾರಿಕೆಗಳನ್ನು ಉತ್ತರ ಕರ್ನಾಟಕದ ಭಾಗದಲ್ಲಿ ಸ್ಥಾಪಿಸಬೇಕು.
- ಕೃಷಿಯಲ್ಲಿ ಸುಧಾರಣೆ ತರಲು ಮುಖ್ಯವಾಗಿ ಕಾನೂನು, ನೀರಾವರಿ ಸೌಲಭ್ಯವನ್ನು ಹೆಚ್ಚಿಸಬೇಕು. ಜೊತೆಗೆ ಆ ಭಾಗದಲ್ಲಿ ಅನೇಕ ಪ್ರಸಿದ್ಧ ಐತಿಹಾಸಿಕ ಸ್ಥಳಗಳಿವೆ. ಅವುಗಳನ್ನು ಪ್ರವಾಸಿ ಕೇಂದ್ರಗಳನ್ನಾಗಿ ಅಭಿವೃದ್ಧಿಪಡಿಸಿ ಕ್ರಮ ಕೈಗೊಳ್ಳಬೇಕು.

**ಸಮಾರೋಪ**

ಈ ಮೇಲಿನ ವಿವರಣೆಗಳಿಂದ ತಿಳಿದುಬರುವುದೇನೆಂದರೆ ಕರ್ನಾಟಕದಲ್ಲಿ ಮಾನವ ಅಭಿವೃದ್ಧಿಯು ಪ್ರಾದೇಶಿಕ ಅಸಮಾನತೆಯಿಂದ ಕೂಡಿದೆ ಎಂಬುದು ಸ್ಪಷ್ಟವಾಗುತ್ತದೆ. ದಕ್ಷಿಣ ಕರ್ನಾಟಕದ ಜಿಲ್ಲೆಗಳು ಮಾನವ ಅಭಿವೃದ್ಧಿಯಲ್ಲಿ ಉನ್ನತ ಮಟ್ಟದ ಅಭಿವೃದ್ಧಿಯನ್ನು ಹೊಂದಿವೆ. ಅಂದರೆ ಅವರ ಜೀವನಮಟ್ಟ, ಆರೋಗ್ಯ ಮತ್ತು ಕೈಗಾರಿಕೆ, ಉದ್ಯಮ ಹಾಗೂ ಶಿಕ್ಷಣ ವಲಯಗಳಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಹೋಲಿಸಿದಾಗ ಉತ್ತಮ ರೀತಿಯಲ್ಲಿ ಅಭಿವೃದ್ಧಿ ಹೊಂದಿರುವುದು ಕಂಡುಬರುತ್ತದೆ. ಉತ್ತರ ಕರ್ನಾಟಕದಲ್ಲಿ ಕಳೆದ ಹಲವಾರು ವರ್ಷಗಳ ಅಭಿವೃದ್ಧಿ ಮತ್ತು ಸಂವಿಧಾನಾತ್ಮಕ ಪ್ರಯತ್ನಗಳ ಮೂಲಕ ಸಾಕಷ್ಟು ಬಂಡವಾಳ ತೊಡಗಿಸಿದ್ದರೂ, ಅಭಿವೃದ್ಧಿಯ ನೀತಿಗಳು ಅಥವಾ ಸೌಲಭ್ಯಗಳು ಕೆಳಹಂತದ ಜನರಿಗೆ ತಲುಪುವುದರ ಮೂಲಕ ಅವರ ಜೀವನದ ಗುಣಮಟ್ಟ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಆಗದೆ ಇರುವುದು ವಿಪರ್ಯಾಸವೇ ಸರಿ. ಯೋಜನೆಗಳ ಪರಿಣಾಮಕಾರಿ ಅನುಷ್ಠಾನದ ಕೊರತೆಯೇ ಇದಕ್ಕೆ ಮುಖ್ಯ ಕಾರಣವಾಗಿದೆ. ಅದಕ್ಕಾಗಿ ಉತ್ತಮ ಗುಣಮಟ್ಟದ ಶಿಕ್ಷಣ, ಆರೋಗ್ಯ, ಆಧುನಿಕ ಕೌಶಲ್ಯಗಳ ಪೂರೈಕೆ, ಉದ್ಯೋಗಾವಕಾಶಗಳ ಸೃಷ್ಟಿ, ನೀರಾವರಿ ಸೌಲಭ್ಯಗಳ ಪೂರೈಕೆ, ಸಮಗ್ರ ಕೃಷಿ ಪದ್ಧತಿಯ ಬೆಳವಣಿಗೆ, ಆಹಾರ ಭದ್ರತೆಯನ್ನು ಒದಗಿಸುವುದು, ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಡೆಗೆ ಹೆಚ್ಚಿನ ಆದ್ಯತೆಯನ್ನು ನೀಡಿದಾಗ, ಈ ತೆರನಾದ ಪ್ರಾದೇಶಿಕ ಅಸಮತೋಲನದ ಕೂಗಿನ ಜೊತೆಗೆ ಪ್ರತ್ಯೇಕ ಬೇಡಿಕೆಯ ಕೂಗುಗಳು ಕೇಳಿ ಬರಲು ಸಾಧ್ಯವಾಗುವುದಿಲ್ಲ ಎಂಬುದು ಒಟ್ಟಾರೆ ಲೇಖನದ ಸಾರವಾಗಿದೆ.

**ಕೊನೆ ಟಿಪ್ಪಣಿಗಳು:**

1. ಗೋಪಾಲ್ ರಾವ್ ಎಚ್. ಎಸ್. 2012, ಕರ್ನಾಟಕ ಏಕೀಕರಣ ಇತಿಹಾಸ, ನವ ಕರ್ನಾಟಕ ಪಬ್ಲಿಕೇಶನ್ಸ್.
2. ಚಂದ್ರಶೇಖರ್ ಎಸ್. 2005, ಏಕೀಕರಣ ಒಂದು ಕಥನ, ಸತ್ಯ ಶ್ರೀ ಪ್ರಿಂಟರ್ಸ್, ಬೆಂಗಳೂರು.
3. ಅದೇ ಪುಸ್ತಕ ಪು.ಸಂ 41
4. ಅಸಾದಿ ಮುಜಾಫರ್ 2017, ಅಸ್ಮಿತೆ, ರಾಜಕಾರಣ ಮತ್ತು ಮೂಲಭೂತವಾದ ಕೆಲವು ಚಿಂತನೆಗಳು, ಲಡಾಯಿ ಪ್ರಕಾಶನ, ಗದಗ.
5. ಅಥಣಿ ಬಸಪ್ಪ, ತಡಸದ ಕಮಲಾಕ್ಷಿ, ರಾಮಸ್ವಾಮಿ ಹರೀಶ್, 2023, ಉತ್ತರ ಕರ್ನಾಟಕದ ಅಭಿವೃದ್ಧಿ ಮತ್ತು ರಾಜಕಾರಣ, ಜಡಭಾರತ ಪ್ರಕಾಶನ, ಧಾರವಾಡ.
6. ಅಥಣಿ ಬಸಪ್ಪ, ತಡಸದ ಕಮಲಾಕ್ಷಿ, ರಾಮಸ್ವಾಮಿ ಹರೀಶ್, 2023, ಉತ್ತರ ಕರ್ನಾಟಕದ ಅಭಿವೃದ್ಧಿ ಮತ್ತು ರಾಜಕಾರಣ, ಜಡಭಾರತ ಪ್ರಕಾಶನ, ಧಾರವಾಡ.
7. ಅಥಣಿ ಬಸಪ್ಪ, ತಡಸದ ಕಮಲಾಕ್ಷಿ, ರಾಮಸ್ವಾಮಿ ಹರೀಶ್, 2023, ಉತ್ತರ ಕರ್ನಾಟಕದ ಅಭಿವೃದ್ಧಿ ಮತ್ತು ರಾಜಕಾರಣ, ಜಡಭಾರತ ಪ್ರಕಾಶನ, ಧಾರವಾಡ. ಪು. ಸಂ. 227.

**ಪರಾಮರ್ಶನ ಗ್ರಂಥಗಳು:**


1. ಗೋಪಾಲ್ ರಾವ್ ಎಚ್. ಎಸ್., 2012, ಕರ್ನಾಟಕ ಏಕೀಕರಣ ಇತಿಹಾಸ, ನವ ಕರ್ನಾಟಕ ಪಬ್ಲಿಕೇಶನ್ಸ್.
2. ಅಥಣಿ ಬಸಪ್ಪ, ತಡಸದ ಕಮಲಾಕ್ಷಿ, ರಾಮಸ್ವಾಮಿ ಹರೀಶ್, 2023, ಉತ್ತರ ಕರ್ನಾಟಕದ ಅಭಿವೃದ್ಧಿ ಮತ್ತು ರಾಜಕಾರಣ, ಜಡಭಾರತ ಪ್ರಕಾಶನ, ಧಾರವಾಡ.
3. ಚಂದ್ರಶೇಖರ್ ಎಸ್., 2005, ಏಕೀಕರಣ ಒಂದು ಕಥನ, ಸತ್ಯ ಶ್ರೀ ಪ್ರಿಂಟರ್ಸ್, ಬೆಂಗಳೂರು.
4. ಗವಿಮಠ ಬಿ. ಎಸ್., 2011, ಬೆಳಗಾವಿ: ಕನ್ನಡ–ಕನ್ನಡಿಗ, ಪ್ರಗತಿ ಪ್ರಿಂಟ್, ಬೆಂಗಳೂರು.
5. ನಾಗಭೂಷಣ್ ಡಿ. ಎಸ್., 2009, ಕನ್ನಡ, ಕರ್ನಾಟಕ ಸಂಕಥನಗಳು, ವಿಸ್ಮಯ ಪ್ರಕಾಶನ, ಮೈಸೂರು.
6. ಜಾಮದಾರ್ ಶಿವಾನಂದ, 2016, ತಾರತಮ್ಯ, ಮನೋಹರ್ ಗ್ರಂಥಮಾಲಾ, ಧಾರವಾಡ.
7. ಚಂದ್ರ ಪೂಜಾರಿ ಎಂ., 2018, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
8. ಅಸಾದಿ ಮುಜಾಫರ್, 2017, ಅಸ್ಮಿತೆ, ರಾಜಕಾರಣ ಮತ್ತು ಮೂಲಭೂತವಾದ ಕೆಲವು ಚಿಂತನೆಗಳು, ಲಡಾಯಿ ಪ್ರಕಾಶನ, ಗದಗ.
9. ಕೇಶವ್ ಶರ್ಮಾ ಕೆ., 2011, ವಸಾಹತುಶಾಹಿ ಅನುಭವ, ಪೂರ್ಣಪ್ರಕಾಶನ, ಶಿವಮೊಗ್ಗ.
10. ಎ ಕ್ರಿಟಿಕಲ್ ಅನಾಲಿಸಿಸ್ ಆಫ್ ಡಾ. ಡಿ. ಎಂ. ನಂಜುಂಡಪ್ಪ ಕಮಿಟಿ ರಿಪೋರ್ಟ್, ಡಾ. ವಿಜಯಕುಮಾರ್ ಸಾಲಿಮನಿ.
11. https://swarajyamag.com/ideas/north–karnataka–state–hood–we–need–a–new–states–reorganisation–commission
12. https://www.shankariasparliament.com/article/north–karnataka's–sectarian–call
13. https://vajiramandravi.com/ques–upsc–notes/regionalism/what–is–regionalism



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.